S. C. No.02/2019
PW.01

**ದೋ.ಸಾ. : 01 ಫ್ರಾ.ಸಾ. : 01**

**ದಿನಾಂಕಃ 01-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

5. ಪಂಚನಾಮೆಯಾದ ನಂತರ ನಾನು ನಮ್ಮ ಊರಿನ ಪರಿಚಯದವರ ಮನೆಯಲ್ಲಿ ಉಳಿದುಕೊಂಡೆನು ಹಾಗೂ ಈ ವಿಷಯವನ್ನು ನನ್ನ ಮಗಳಿಗೆ ತಿಳಿಸಿರುತ್ತೇನೆ. ದಿಃ 15-11-2017 ರಂದು ಬೆಳಿಗ್ಗೆ ನನ್ನ ಮಗಳು ನಾನು ಉಳಿದುಕೊಂಡಿದ್ದ ನಮ್ಮ ಪರಿಚಯದವರು ಮನೆಗೆ ಬಂದಿರುತ್ತಾಳೆ. ಆ ನಂತರ ನಾವಿಬ್ಬರೂ ನಮ್ಮ ಮನೆಗೆ ಹೋಗಿ ನೋಡಿದಾಗ ಮನೆಯ ಹೊರಗೆ 3 ಲೀಟರ್ ಸೀಮೆಎಣ್ಣೆ ಇರುವ ಒಂದು ಕ್ಯಾನ್, ಒಂದು ಬೆಂಕಿ ಕಡ್ಡಿ ಪೊಟ್ಟಣ ಮತ್ತು ಒಂದು ಕಟ್ಟಿಗೆಗೆ ಬಟ್ಟೆ ಸುತ್ತಿರುವ ಪಂಜು ಇದ್ದವು. ಅವುಗಳನ್ನು ನೋಡಿದ ನಾವು ಪೊಲೀಸ್ ಠಾಣೆಗೆ ಹೋಗಿ, ನಮ್ಮ ಮನೆಯ ಹೊರಗೆ ಇದ್ದ ವಸ್ತುಗಳ ಬಗ್ಗೆ ಹೇಳಿ, ಆರೋಪಿತರ ವಿರುದ್ಧ ನಾವು ದೂರು ಕೊಟ್ಟಿರುವುದಕ್ಕೆ, ದ್ವೇಷದಿಂದ ಅವರು ನಮ್ಮ ಮನೆಗೆ ಸೀಮೆಎಣ್ಣೆ ಹಾಕಿ, ನಮ್ಮನ್ನು ಕೊಲ್ಲುವ ಉದ್ದೇಶದಿಂದ ಸದರಿ ವಸ್ತುಗಳನ್ನು ತಂದಿರುತ್ತಾರೆ ಎಂದು ಮರು ಹೇಳಿಕೆಯನ್ನು ನೀಡಿರುತ್ತೇನೆ.

6. ದಿಃ 16-11-2017 ರಂದು ಬೆಳಿಗ್ಗೆ 08-00 ಗಂಟೆಗೆ ಪೊಲೀಸರು ಪಂಚರಾದ ಚಾಸಾ-2 ಮತ್ತು 3 ರವರೊಂದಿಗೆ 1 ನೇ ಆರೋಪಿಯನ್ನು ಕರೆದುಕೊಂಡು ನಮ್ಮ ಮನೆಯ ಹತ್ತಿರ ಬಂದಿರುತ್ತಾರೆ. ಪೊಲೀಸರು ಬರುವವರೆಗೆ ಸದರಿ ವಸ್ತುಗಳು ಅಲ್ಲಿಯೇ ಶೆಡ್ ಹತ್ತಿರ ಇದ್ದವು. 1 ನೇ ಆರೋಪಿಯು ಸದರಿ ವಸ್ತುಗಳನ್ನು ತೋರಿಸಿ, ಪಿರ್ಯಾದಿಯು ನಮ್ಮ ಮೇಲೆ ದೂರು ಕೊಟ್ಟ ದ್ವೇಷದಿಂದ, ಅವರ ಮನೆಗೆ ಸೀಮೆಎಣ್ಣೆ ಹಾಕಿ ಕೊಲೆ ಮಾಡಬೇಕೆಂದು ತಂದಿರುತ್ತೇನೆ ಎಂದು ಹೇಳಿರುತ್ತಾನೆ. ಆ ಸಮಯದಲ್ಲಿ ಚಾಸಾ-9 ನನ್ನ ಮಗಳು, ನಮ್ಮ ಊರಿನವರಾದ ಚಾಸಾ-4 ರಿಂದ 7 ರವರು ಸಹ ಸ್ಥಳದಲ್ಲಿ ಹಾಜರಿದ್ದರು. ಪೊಲೀಸರು ಅವುಗಳನ್ನು ತೆಗೆದುಕೊಂಡು ಹೋದರು. ಆ ಸಮಯದಲ್ಲಿ ಸ್ಥಳದಲ್ಲಿ ಹಾಜರಿದ್ದ ಚಾಸಾ-6 ಮತ್ತು 7 ರವರು ನನ್ನ ಬಳಿ "ನೀವು ದೂರು ಕೊಟ್ಟ ನಂತರ 1 ನೇ ಆರೋಪಿಯು ಅವರನ್ನು ಸೀಮೆಎಣ್ಣೆ ಹಾಕಿ ಕೊಲೆ ಮಾಡುತ್ತೇನೆಂದು ಊರಿನಲ್ಲಿ ಹೇಳಿಕೊಂಡು ಬರುತ್ತಿದ್ದ ಎಂದು ಹಾಗೂ 1 ನೇ ಆರೋಪಿಯು ಸದರಿ ವಸ್ತುಗಳನ್ನು ತೆಗೆದುಕೊಂಡು ನಿಮ್ಮ ಮನೆ ಕಡೆಗೆ ಹೋಗುತ್ತಿದ್ದನ್ನು ನೋಡಿರುತ್ತೇವೆ" ಎಂದು ಹೇಳಿರುತ್ತಾರೆ.

7. ಆ ನಂತರ ಲೋಕೋಪಯೋಗಿ ಇಲಾಖೆಯ ಇಂಜನೀಯರ್ ರವರು ಘಟನಾ ಸ್ಥಳದ ನಕಾಶೆ ತಯಾರಿಸಲು ನಮ್ಮ ಮನೆ ಹತ್ತಿರ ಬಂದಿದ್ದು, ನಾನು ಸ್ಥಳವನ್ನು ತೋರಿಸಿರುತ್ತೇನೆ. ಆ ನಂತರ ಹೊನ್ನಾವರ ನ್ಯಾಯಾಲಯದಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಮತ್ತು 3(ಬಿ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಸೀಮೆಎಣ್ಣೆ ಕ್ಯಾನ್ (ಕ್ಯಾನ್ ನಲ್ಲಿದ್ದ ಸೀಮೆಎಣ್ಣೆಯನ್ನು ಪರೀಕ್ಷೆಗೆ ಕಳುಹಿಸುವ ಸಲುವಾಗಿ ಕ್ಯಾನ್ ನಿಂದ ಹೊರಗೆ ತೆಗೆದು ಸ್ವಲ್ಪ ಪ್ರಮಾಣವನ್ನು ಪರೀಕ್ಷೆಗೆ ಕಳುಹಿಸಿ, ಉಳಿದ ಸೀಮೆಎಣ್ಣೆಯನ್ನು 3 ಬಾಟಲಿಗಳಲ್ಲಿ ತುಂಬಿಟ್ಟಿರುವುದು ಕಂಡುಬಂದಿರುತ್ತದೆ) ಒಂದು ಬೆಂಕಿ ಕಡ್ಡಿ ಪೊಟ್ಟಣ ಮತ್ತು ಒಂದು ಕಟ್ಟಿಗೆಗೆ ಬಟ್ಟೆ ಸುತ್ತಿರುವ ಪಂಜುನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮುದ್ದೆ ಮಾಲು-1 ರಿಂದ 3 ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಆರ್.ವಿ.ಎನ್ ವಕೀಲರಿಂದ</u>**

ಆರೋಪಿತರ ಪರ ವಕೀಲರು ಕಲಂ.231 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಸಾಕ್ಷಿದಾರ 1, 4, 5, 6, 7 ಮತ್ತು 9 ರವರ ಮುಖ್ಯ ವಿಚಾರಣೆ ಆಗುವವರೆಗೆ ಸದರಿ ಸಾಕ್ಷಿದಾರರ ಪಾಟೀ ಸವಾಲನ್ನು ಮುಂದೂಡುವಂತೆ ಕೋರಿಕೊಂಡ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ